




## ಕಾನ್‌ಫೈಡ್

ಆ್ಯಂಡ್ರಾಯ್ಡ್‌ನ ಈ ಆ್ಯಪ್‌ನಿಂದ ಖಾಸಗಿ ಹಾಗೂ ಗೌಪ್ಯವಾದ ಅಟ್ಯಾಚ್‌ಮೆಂಟ್ ಕಳಿಸಬಹುದು. ವಿನ್ಯಾಸ ಉತ್ತಮವಾಗಿದ್ದು, ಉಜ್ಜಿದರೆ ಸ್ಪಷ್ಟವಾಗಿ ಕಾಣುವಂತಹ ತಂತ್ರಜ್ಞಾನ ಬಳಸಲಾಗಿದೆ. ಓದಿದ ನಂತರ ಸಂದೇಶಗಳನ್ನು ಅಳಿಸಿ ಹಾಕುತ್ತದೆ. ಭದ್ರತೆ ಹಾಗೂ ಖಾಸಗಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಆದರೆ ಚಿತ್ರಗಳನ್ನು ಹಾಗೂ ಪಿಡಿಎಫ್ ಅಟ್ಯಾಚ್‌ಮೆಂಟ್‌ಗಳನ್ನು ಮಾತ್ರ ಬೆಂಬಲಿಸುತ್ತದೆ. ಹೊಸದಾಗಿ ಬಂದ ಸಂದೇಶಗಳು ಕಿತ್ತಳೆ ಬಣ್ಣದಲ್ಲಿ, ಆಯತಾಕಾರದಲ್ಲಿ ಕಾಣಿಸಿಕೊಳ್ಳುತ್ತವೆ. ಸಂದೇಶ ಓದಬೇಕಾದರೆ ಸ್ಕ್ರೀನ್ ಮೇಲೆ ಹೆಬ್ಬೆರಳಿನಿಂದ ಕೆಳಮುಖವಾಗಿ ಉಜ್ಜಿ.





## ಮನಿ ಮೆಸೆಂಜರ್

ಫೇಸ್‌ಬುಕ್ ಮೆಸೆಂಜರ್ ಮೂಲಕ ಇನ್ನು ಮುಂದೆ ಹಣ ಕಳಿಸಬಹುದು. ಕ್ರೆಡಿಟ್/ ಡೆಬಿಟ್ ಕಾರ್ಡ್ ಹಾಗೂ ಬ್ಯಾಂಕ್ ಖಾತೆಗೆ ಜೋಡಿಸಲಾಗಿರುವ ಫೇಸ್‌ಬುಕ್ ಖಾತೆಯ ಮೂಲಕ ನಿಮಗೆ ಬೇಕಾದವರಿಗೆ ಈ ಆ್ಯಪ್ ಮೂಲಕ ಹಣ ಸಂದಾಯ ಮಾಡಬಹುದು. ಐಫೋನ್ ಹಾಗೂ ಆ್ಯಂಡ್ರಾಯ್ಡ್ ಬಳಕೆದಾರರು ಫೇಸ್‌ಬುಕ್ ಮೆಸೆಂಜರ್‌ನಲ್ಲಿರುವ ಹೊಸ ಐಕಾನ್ ಒತ್ತಿ ಹಣದ ಮೊತ್ತವನ್ನು ನಮೂದಿಸಬೇಕು. ನಂತರ ನಿಮ್ಮ ಕಾರ್ಡ್ ನಂಬರ್ ಹಾಕಬೇಕು.

## ಡ್ರಾಪ್‌ಬಾಕ್ಸ್

ವಿಂಡೋಸ್ ಫೋನಿನ ಈ ಆ್ಯಪ್ ಫೈಲ್ಸ್‌ಗೆ ಸಿಂಕ್ ಮಾಡುವುದಲ್ಲದೇ ಸ್ವಯಂಚಾಲಿತವಾಗಿ ಫೋಟೋಗಳನ್ನು ಅಪ್‌ಲೋಡ್ ಮಾಡುತ್ತದೆ. ಸರಳವಾದ ಆದರೆ ಸ್ಪಷ್ಟವಾದ ಮೇಲ್ಮೈ. ಇದನ್ನು ವಿಂಡೋಸ್ ಫೋನ್ ಆ್ಯಪ್ಸ್+ಗೇಮ್ಸ್ ಸ್ಟೋರ್‌ನಿಂದ ಪಡೆಯಬಹುದು. ವಿಂಡೋಸ್ 8 ಹಾಗೂ 8.1 ಫೋನ್‌ನಲ್ಲಿ ಅಳವಡಿಸಬಹುದು. ಡ್ರಾಪ್‌ಬಾಕ್ಸ್ ಖಾತೆಗೆ ಸೈನ್ ಮಾಡಬೇಕಾಗುತ್ತದೆ. ಲಾಗಿನ್ ಆದ ನಂತರ ಮೇಲೆ ಮೂರೂ ಹಾಗೂ ಕೆಳಗೆ ಮೂರು ಬಟನ್ ಕಾಣಿಸುತ್ತವೆ. ಈ ಬಟನ್ ಮೂಲಕ ಹೊಸ ಫೈಲ್ ಸೃಷ್ಟಿಸಿ ಅಪ್‌ಲೋಡ್ ಮಾಡಬಹುದು. ದಿನಾಂಕ, ಹೆಸರಿನ ಮೇಲೆ ವಿಂಗಡಿಸಿಕೊಳ್ಳಬಹುದು.




## ಮೀರ್‌ಕ್ಯಾಟ್

ಸಾಮಾಜಿಕ ಜಾಲತಾಣದಲ್ಲಿ ಲೈವ್ ವಿಡಿಯೋ ಸ್ಟ್ರೀಮಿಂಗ್ ಆ್ಯಪ್ ಈಗಾಗಲೇ ಜನಪ್ರಿಯವಾಗಿದೆ. ಇದು ಆ್ಯಪಲ್‌ನ ಆನ್‌ಲೈನ್ ಆ್ಯಪ್ ಸ್ಟೋರ್‌ನಲ್ಲಿ ಲಭ್ಯ. ಐಫೋನ್ ಇದ್ದವರು ವರದಿಗಾರರಾಗಬಹುದು. ಅಂದರೆ ಯಾವುದೇ ಘಟನೆಯನ್ನು ವಿಡಿಯೋ ಮಾಡುತ್ತಲೇ ಒಂದು ಬಟನ್ ಒತ್ತುವ ಮೂಲಕ ಟ್ವಿಟರ್‌ನಲ್ಲಿ ಪ್ರಸಾರ ಮಾಡಬಹುದು. ಟ್ವೀಟ್ ನೋಡುವವರಿಗೆ ಕೆಳಗಡೆ ಯಾರು ವಿಡಿಯೋ ಶೂಟ್ ಮಾಡುತ್ತಿದ್ದಾರೆ ಎಂಬುದರ ಚಿಕ್ಕ ವಿವರವೂ ಲಭ್ಯವಿರುತ್ತದೆ. ವಿಡಿಯೋವನ್ನು ಸೇವ್ ಮಾಡಿಕೊಂಡು ನಂತರ ನೋಡುವ ಸೌಲಭ್ಯವೂ ಇದೆ.

■ ಎಸ್. ತುಂಬೆ